2) ಹಾಗಿದ್ದಲ್ಲಿ ದುರುಪಯೋಗದ ಹಣವೆಷ್ಟು?

3) ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ.

4) ಅವ್ಯವಹಾರ ನಡೆದಿರುವುದು ಸಾಬೀತಾಗಿದ್ದರೂ ಸಹ ಸದರಿ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡದೇ ಇರಲು ರಾಜಕೀಯ ಒತ್ತಡವೇನಾದರೂ ಇದೆಯೇ? (ಕಾರಣ ನೀಡಿ)

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು):

1) ಹೌದು

2) ರೂ. 8, 38, 505-00

3) ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಪ್ರಕಾರ ವಿಚಾರಣೆಗೆ ಆದೇಶಿಸಿದ್ದು, ವರದಿ ದಿನಾಂಕ: 31-3-2000ರಂದು ಸ್ವೀಕೃತಿಯಾಗಿದೆ. ಈ ವರದಿಯಾಧಾರದ ಮೇಲೆ ದುರುಪಯೋಗಕ್ಕೆ ಕಾರಣರಾದವರ ಮೇಲೆ ಕ್ರಮ ಕೈಗೊಳ್ಳಲು ಸಹಕಾರ ಸಂಘಗಳ ಕಾಯ್ದೆ ಕಲಂ 68ರನ್ವಯ ಸಂಘಕ್ಕೆ ನಿರ್ದೇಶನ ನೀಡಲಾಗಿದೆ. ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ)ರನ್ವಯ ಅಧ್ಯಕ್ಷರನ್ನು ಅನರ್ಹಗೊಳಿಸಿದ್ದು, ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿರುತ್ತದೆ.

4) ಇಲ್ಲ

ಕೊಡಗು ಜಿಲ್ಲೆಯ ತೋಟಗಾರಿಕೆ ಇಲಾಖೆಗೆ ಬಿಡುಗಡೆಯಾದ ಹಣ.

2467(2033)

Sr. Appachu Ranjan (ಸೋಮವಾರಪೇಟೆ): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. What is the amount released for Horticulture in Kodagu District? (Talukwise details to be furnished)

ಶ್ರೀ ಅಲ್ಲಂ ವೀರಭದ್ರಪ್ಪ (MINISTER OF STATE FOR HORTICULTURE):

1. Details of talukwise releases made to Horticulture

in Kodagu district during 1999-2000 are furnished in Annexure-1.

ಅನುಬಂಧ- I

1999-2000ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ತೋಟಗಾರಿಕೆಗಾಗಿ ಮಾಡಿದ ಹಣದ ಪಿವರ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ತೋಟಗಾರಿಕೆ ಇಲಾಖೆ: ಯೋಜನೆಗಳು	ತಾಲ್ಲೂಕುವಾರು ಬಿಡುಗಡೆ ಮಾಡಿದ ಅನುದಾನ			
		ಸೋಮವಾರಪೇಟೆ	ವಿರಾಜಪೇಟೆ	ಮಡಕೇರಿ	ಒಟ್ಟು
1	ರಾಜ್ಯವಲಯ ಯೋಜನೆಗಳು	9.735	26.96	16.81	78.275
2	ಕೇಂದ್ರವಲಯ ಯೋಜನೆಗಳು	27.505	29.96	16.81	74.275
3	ಜಿಲ್ಲಾವಲಯ ಯೋಜನೆಗಳು	4.58	3.74	3.81	12.13
		41.82	38.15	25.50	106.735